ಕವಿತೆಗಳ ಬಗೆಗೂ ಬಹಳ ಕ್ರಿಟಿಕಲ್ ಆಗಿದ್ದ ಗಿರಡ್ಡಿ ಯಾಕೋ ಕಾವ್ಯದ ಬಗ್ಗೆ ಅಲಕ್ಷ್ಯ, ವಿಮರ್ಶೆಯ ಬಗ್ಗೆ ಆಸಕ್ತಿಯನ್ನು ನಾವು ವಿದ್ಯಾರ್ಥಿಗಳಾಗಿದ್ದಾಗಲೇ ಬೆಳೆಸಿಕೊಳ್ಳತೊಡಗಿದ್ದ.

ಸಾಮಾನ್ಯವಾಗಿ ಗಿರಡ್ಡಿ, ಪಿಎಂ ಕೂಡಿಕೊಂಡು ಇಂಗ್ಲಿಷ್ ಸಿನಿಮಾ ನೋಡಲು ಹೋಗುತ್ತಿದ್ದರು. ಕಾದಂಬರಿ, ಪತ್ರಿಕೆ, ಸಿನಿಮಾಗಳ ಮೂಲಕ ಇಂಗ್ಲಿಷ್‌ನ್ನು 'ಸಾದು ಮಾಡಿಕೊಳ್ಳುವುದು' ಅವರ ರೀತಿಯಾಗಿತ್ತು. ಅದರ ಅಂಗವಾಗಿಯೇ ಕಾಲೇಜಿನ ಕೊನೆಯ ಎರಡು ವರ್ಷಗಳಲ್ಲಿ ಪಿಎಂನ ಸಲಹೆ, ವಿನಂತಿಪರ ಆದೇಶದ ಮೇರೆಗೆ ನಾವು ಎಲ್ಲ ವಿಷಯಗಳ ಬಗ್ಗೆ ಇಂಗ್ಲಿಷಿನಲ್ಲಿಯೇ ಮಾತಾಡುತ್ತಿದ್ದೆವು. ವ್ಯಾಕರಣಕ್ಕೆ ಸಂಬಂಧಪಟ್ಟಂತೆ ಪಿಎಂ ನೀಡುವ ಸಲಹೆಗಳನ್ನು ಒಪ್ಪುತ್ತಿದ್ದೆವು, ಆದರೆ ಇಂಗ್ಲಿಷ್ ಉಚ್ಚಾರ, ಪ್ರೊನನ್ಸಿಯೇಶನ್‌ದ ಮಟ್ಟಿಗೆ ಮಾತ್ರ ಗಿರಡ್ಡಿ ಒಪ್ಪಲಿಲ್ಲ. ಬದಲಾಗಿ 'ಹಾಗೇ ಯಾಕಾಗಬೇಕು? ಹೀಗೆ ಯಾಕಾಗಬಾರದು?' ಎಂದೆಲ್ಲ ತನ್ನ ಕಂಗ್ಲಿಷ್‌ದಲ್ಲಿಯೇ ವಾದಕ್ಕೆ ನಿಲ್ಲುತ್ತಿದ್ದ.

ಒಮ್ಮೆ ನಾವು ಮೂವರೂ ಕೂಡಿಕೊಂಡು ಒಂದು ಇಂಗ್ಲಿಷ್ ಸಿನಿಮಾ ನೋಡಲು ಹೋಗಿದ್ದೆವು. 'ಎ ಫೇರ್‌ವೆಲ್ ಟು ಆರ್ಮ್ಸ್.' ಅದೇ ತಲೆಕಟ್ಟಿನ ಅರ್ನೆಸ್ಟ್ ಹೆಮಿಂಗ್ವೇ ಬರೆದ ಕಾದಂಬರಿಯನ್ನು ಓದಿದ್ದೆ. ಅಷ್ಟು ತಿಳಿದಿರಲಿಲ್ಲ. ಈಗ ಅದರ ಯಶಸ್ವಿ ಸಿನಿಮಾ ಬಂದಿತ್ತು. ಕತೆಯ ಸುಳಿವು ತಿಳಿದಿದ್ದರಿಂದ ನಿಧಾನ ಅದರಲ್ಲಿ ಒಂದಾಗತೊಡಗಿದೆ. ಕೊನೆಯ ದೃಶ್ಯದ ಹೊತ್ತಿಗೆ ನಾಯಕ ತನ್ನ ಅಮೆರಿಕೆಗೆ ತೆರಳುತ್ತಿದ್ದಾನೆ, ಇಲ್ಲಿ ಇಂಗ್ಲಂಡ್‌ದ ಪ್ರೇಯಸಿ ಅವನ ಕೂಸಿಗೆ ಜನ್ಮ ನೀಡುತ್ತಿದ್ದಾಳೆ. ಆಸ್ಪತ್ರೆಯ ದೃಶ್ಯ, ಅವರಿಬ್ಬರ

